# ಮಾತೃಸ್ಮೃತಿಯ ಸುಧೆ

ಬಂಗಾಳಿ ಮೂಲ: **ಸ್ವಾಮಿ ವಾಸುದೇವಾನಂದ** ಅನುವಾದ : **ಸ್ವಾಮಿ ಜ್ಞಾನಯೋಗಾನಂದ**

## ಭಾಗ – ೧

**ಸು**ಮಾರು ೧೯೧೨ರ ಏಪ್ರಿಲ್ – ಮೇ ತಿಂಗಳಲ್ಲಿ ನಾನು ಬೇಲೂರು ಮಠಕ್ಕೆ ಹೋಗಿದ್ದೆ. ಗಂಗಾರಾಮ ಮಹಾರಾಜರನ್ನು ಭೇಟಿಯಾಗಿದ್ದೆ.[೧] ಅವರೊಂದಿಗೆ ನಾನು ಹಿಂದೆ ಮಾತನಾಡಿದ್ದು ೧೯೦೮ನೇ ಇಸವಿಯಲ್ಲಿ. ಅವರು ಹೇಳಿದರು, ''ನಾನು 'ಉದ್ಬೋಧನ'ಕ್ಕೆ ಹೋಗುತ್ತೇನೆ. ನೀನು ಬರುತ್ತೀಯಾ?'' ನಾನು ಅದಕ್ಕೆ ಎರಡು ಮಾತನಾಡದೆ, ಅವರೊಂದಿಗೆ ಹೊರಟೆ. ಒಬ್ಬರು ಸಾಧುಗಳು – ಬೂಢೋ ಬಾಬಾ[೨] ( ವೃದ್ಧ ಸಂನ್ಯಾಸಿಗಳು ಎಂದರ್ಥ) ಹೇಳಿದರು: ''ಗಂಗಾರಾಮ ಚೆನ್ನಾಗಿ ಶಿಷ್ಯನನ್ನು ಮಾಡಿಕೊಂಡಿದ್ದಾನೆ. ಆದರೂ ನೀನು ಇನ್ನೊಂದು ದಿನ ಬಂದು ಬೇಲೂರು ಮಠದಲ್ಲಿ ಪ್ರಸಾದ ತೆಗೆದುಕೊಂಡು ಹೋಗು.'' ನಾನು, ''ನೀವು ಹೇಳಿದಂತೆ'' ಎಂದು ಹೇಳಿ ಅಲ್ಲಿಂದ ಹೊರಟೆ. 'ಉದ್ಬೋಧನ' ತಲುಪಿ, ಶ್ರೀಮಾತೆಯವರ ದರ್ಶನ ಮಾಡಿದೆ. ನಾನು ಶ್ರೀಮಾತೆಯವರನ್ನು ಮೊದಲ ಬಾರಿಗೆ ದರ್ಶನ ಮಾಡಿದ್ದು ಆಗಲೇ.

ಶ್ರೀಮಾತೆಯವರು ತಮ್ಮ ದೇಹವನ್ನೆಲ್ಲ ಬಿಳಿಯ ಶಾಲಿನಿಂದ ಮುಚ್ಚಿಕೊಂಡಿದ್ದರು. ನಾನು ಪ್ರಣಾಮ ಮಾಡಿದೆ. ಅವರ ಪಾದಗಳನ್ನು ಸ್ಪರ್ಶಿಸುತ್ತೇನೆ, ಅವರ ಪಾದಧೂಳಿಯನ್ನು ತೆಗೆದುಕೊಳ್ಳುತ್ತೇನೆ — ಎಂಬುದು ನನ್ನ ಕಲ್ಪನೆಗೂ ಮೀರಿದ್ದಾಗಿತ್ತು. ಗಂಗಾರಾಮ ಮಹಾರಾಜರ ಮೂಲಕ ಶ್ರೀಮಾತೆಯವರು ಕೆಳ ಅಂತಸ್ತಿನಿಂದ ನನಗೆ ಪ್ರಸಾದ ಕಳುಹಿಸಿಕೊಟ್ಟರು. ಬಳಿಕ ನಾನು ಮನೆಗೆ[೩] ಹಿಂದಿರುಗಲು ರಸ್ತೆಯ ಕಡೆಗೆ ಬಂದೆ. ನನ್ನೊಂದಿಗೆ ಗಂಗಾರಾಮ ಮಹಾರಾಜ್ ಹಾಗೂ ಕಪಿಲ[೪] ಮಹಾರಾಜ್ ಕೂಡ ಬಂದರು. ಇಬ್ಬರೂ ಹೇಳಿದರು: ''ನಿನ್ನದು ಮಹಾ ಸೌಭಾಗ್ಯ! '' ಗಂಗಾರಾಮ ಮಹಾರಾಜರು ಮಧ್ಯಾಹ್ನದ ಊಟಕ್ಕೆ ಅಲ್ಲಿಯೇ ಉಳಿದರು. ಅನಂತರ ಶ್ರೀಮಾತೆಯವರು 'ಉದ್ಬೋಧನ'ದಲ್ಲಿ ಇದ್ದಾರೆ ಎಂದು ತಿಳಿದಾಗಲೆಲ್ಲ ನಾನು, ಪರೇಶ್,[೫] ನಗೇನ್,[೬] ಎಲ್ಲರೂ ಅವರ ದರ್ಶನ ಮಾಡಲು ಅಲ್ಲಿಗೆ ಹೋಗಿಯೇ ಹೋಗುತ್ತಿದ್ದೆವು. ಬೇಲೂರು ಮಠಕ್ಕೆ ಹಾಗೂ ಬಲರಾಮ ಮಂದಿರಕ್ಕೆ ಹೋಗಿಬರುತ್ತ ಬೂಢೋ ಬಾಬಾ ಅವರೊಂದಿಗೆ ಸಾಕಷ್ಟು ಮಾತುಕತೆಗಳು ನಡೆದವು. ಅವರು ನನಗೆ ಸಂನ್ಯಾಸಿಯಾಗಲು ತುಂಬಾ ಪ್ರೇರಣೆ ನೀಡಿದರು.

ಆಂತರಿಕ ಅನುಭವದ ಬಗ್ಗೆ ಯಾರಿಗೂ ಹೇಳುವ ಇಚ್ಛೆ ನನಗಿಲ್ಲ – ಕಾರಣ, ಅದಕ್ಕೆ ಯಾವುದೇ ತಾರ್ಕಿಕ ವಿವರಣೆ ನೀಡುವುದು ನನಗೆ ಸಾಧ್ಯವಿಲ್ಲ. ಬಾಲ್ಯದಿಂದಲೇ ನನ್ನ ತಲೆ ಕೆಟ್ಟು ಹೋಗಿತ್ತೋ ಇಲ್ಲವೋ ನನಗೆ ಗೊತ್ತಾಗುತ್ತಿರಲಿಲ್ಲ. ಕತ್ತಲೆಯ ಕೋಣೆಗೆ ಹೋದರೆ ಸಾಕು, ನಾನು ರಾಧಾಕೃಷ್ಣರ ಜ್ಯೋತಿರ್ಮಯ ಮೂರ್ತಿಯನ್ನು ಕಾಣುತ್ತಿದ್ದೆ. ಕನಸಿನಲ್ಲಿ ನಾನು ಉಜ್ಜ್ವಲವಾಗಿ ಬೆಳಗುತ್ತಿದ್ದ ಓಂಕಾರವನ್ನು ನೋಡುತ್ತಿದ್ದೆ; ಅದು ಇಡೀ ಆಕಾಶವನ್ನೇ ವ್ಯಾಪಿಸಿಕೊಂಡಿರುತ್ತಿತ್ತು! ಅದೇ ರೀತಿ, ನಿಜವಾಗಿಯೂ ವೃಷಭವನ್ನೇರಿದ ಶಿವಪಾರ್ವತಿಯರನ್ನು ಕಣ್ಣು ಮುಚ್ಚಿಕೊಂಡಿದ್ದರೂ ಕಾಣುತ್ತಿದ್ದೆ. ಆಗ ಮಿರ್ಜಾಪುರ್ ಸ್ಟ್ರೀಟ್ (ಈಗಿನ ಸೂರ್ಯಸೇನ್ ಸ್ಟ್ರೀಟ್)ನಲ್ಲಿದ್ದ ಬಿಪಿನ್ ಸ್ಕೂಲ್‌ನಲ್ಲಿ (ಈಗಿನ ಸುರೇಂದ್ರನಾಥ ಕಾಲೇಜಿಯೇಟ್ ಸ್ಕೂಲ್) ನಾನು ಮೂರನೇ ತರಗತಿಯಲ್ಲಿ ( ಈಗಿನ ಎಂಟನೇ ಕ್ಲಾಸ್) ಓದುತ್ತಿದ್ದೆ.

---

೧ ಸ್ವಾಮಿ ಗಂಗಾನಂದರು; ಸ್ವಾಮಿ ಬ್ರಹ್ಮಾನಂದರಿಂದ ಮಂತ್ರದೀಕ್ಷೆ ಪಡೆದಿದ್ದರು. ೧೯೦೪ರಲ್ಲಿ ಅವರು ರಾಮಕೃಷ್ಣ ಮಹಾಸಂಘವನ್ನು ಸೇರಿಕೊಂಡರು. ತೀರ್ಥಯಾತ್ರೆ, ತಪಸ್ಯೆ ಮುಂತಾದುವುಗಳ ಕಡೆಗೆ ಅವರಿಗೆ ವಿಶೇಷ ಸೆಳೆತವಿತ್ತು. ೧೯೫೫ರ ಜೂನ್ ೬ರಂದು ಬಾಂಕುರ ಜಿಲ್ಲೆಯ ವಿಷ್ಣುಪುರದಲ್ಲಿ ಅವರು ದೇಹತ್ಯಾಗ ಮಾಡಿದರು. *(–ಸಂ)*

೨ ಅವರ ಸಂನ್ಯಾಸ ನಾಮ – ಸ್ವಾಮಿ ಸಚ್ಚಿದಾನಂದ ಎಂದು. ಅವರ ಹಿಂದಿನ ಹೆಸರು ದೀನಾನಾಥ ಸೇನ್. ಅವರು ದೀನ್ ಮಹಾರಾಜ್ ಎಂದೇ ಎಲ್ಲರಿಗೂ ಪರಿಚಿತರು. ಅವರು ಸ್ವಾಮಿ ಶಾರದಾನಂದರಿಂದ ಸಂನ್ಯಾಸದೀಕ್ಷೆ ಪಡೆದಿದ್ದರು. ಅವರು ವಯಸ್ಸಿನಲ್ಲಿ ಸ್ವಾಮಿ ಶಾರದಾನಂದರಿಗಿಂತಲೂ ಹಿರಿಯರಾಗಿದ್ದರು; ಮಾತ್ರವಲ್ಲ, ಶ್ರೀರಾಮಕೃಷ್ಣರ ನೇರ ಶಿಷ್ಯರಾಗಿದ್ದ ಸ್ವಾಮಿ ಅದ್ವೈತಾನಂದರೇ ಮೊದಲಾದ ಇತರ ಶಿಷ್ಯರಿಗಿಂತಲೂ ವಯಸ್ಸಿನಲ್ಲಿ ಹಿರಿಯರಾಗಿದ್ದರು. ಆದ್ದರಿಂದಲೇ ರಾಮಕೃಷ್ಣ ಮಹಾಸಂಘದಲ್ಲಿ ಅವರನ್ನು ಎಲ್ಲರೂ 'ಬೂಢೋ ಬಾಬಾ' ಎಂದು ಕರೆಯುತ್ತಿದ್ದರು. ಅವರು ೧೯೨೬ರ ಜೂನ್ ೨೨ರಂದು, ತಮ್ಮ ೮೬ನೇ ವಯಸ್ಸಿನಲ್ಲಿ ತೀರಿಕೊಂಡರು. *(–ಸಂ)*

೩ ಕಲ್ಕತ್ತೆಯಲ್ಲಿ ಅವರ ಮನೆ ಹಿಂದಿನ ಆಮ್‌ಹರ್ಸ್ಟ್ ಸ್ಟ್ರೀಟ್ (ಈಗ ರಾಜಾ ರಾಮಮೋಹನ ಸರಣಿ) ಹಾಗೂ ಹ್ಯಾರಿಸನ್ ರೋಡ್ (ಇಂದಿನ ಮಹಾತ್ಮಾ ಗಾಂಧಿ ರೋಡ್) ಇವೆರಡೂ ಸೇರುವ ಸ್ಥಳಕ್ಕೆ ಸಮೀಪವಿತ್ತು. *(–ಸಂ)*

೪ ಸ್ವಾಮಿ ವಿಶ್ವೇಶ್ವರಾನಂದ *(–ಸಂ)*

೫ ಮುಂದೆ ಅವರೇ ಸ್ವಾಮಿ ಅಮೃತೇಶ್ವರಾನಂದರು. ಅವರು ಸ್ವಾಮಿ ಬ್ರಹ್ಮಾನಂದರಿಂದ ದೀಕ್ಷೆ ಪಡೆದರು. ೧೯೧೪ರಲ್ಲಿ ಅವರು ರಾಮಕೃಷ್ಣ ಮಹಾಸಂಘವನ್ನು ಸೇರಿಕೊಂಡರು. ಮುಂದೆ ಅವರು ರಾಮಕೃಷ್ಣ ಮಠ ಹಾಗೂ ಮಿಷನ್ನಿನ ಸಹ– ಕಾರ್ಯದರ್ಶಿಗಳಾಗಿದ್ದರು. ೧೯೪೬ರ ಮಾರ್ಚ್ ೨೬ರಂದು ಅವರು ಲಾಹೋರ್ ರಾಮಕೃಷ್ಣ ಮಿಷನ್ನಿನಲ್ಲಿ ನಿಧನರಾದರು. *(–ಸಂ)*

೬ ಸ್ವಾಮಿ ಸಹಜಾನಂದರು. ಅವರು ರಾಮಕೃಷ್ಣ ಮಿಷನ್ ಸೇರುವ ಮುನ್ನ ಸ್ವದೇಶೀ ಆಂದೋಲನದಲ್ಲಿ ತೊಡಗಿಕೊಂಡಿದ್ದರು. ೧೯೧೨ರಲ್ಲಿ ಅವರು ಮಿಷನ್ ಸೇರಿದರು. ಅವರೂ ಕೂಡ ಸ್ವಾಮಿ ಬ್ರಹ್ಮಾನಂದರಿಂದ ಮಂತ್ರದೀಕ್ಷೆ ಪಡೆದವರು. ೧೯೪೧ರ ಡಿಸೆಂಬರ್ ೧೬ ರಂದು ಕಾಶಿ ಸೇವಾಶ್ರಮದಲ್ಲಿ ಅವರು ನಿಧನರಾದರು. *(–ಸಂ)*

ಬೇಲೂರು ಮಠಕ್ಕೆ ಹೋಗುವ ಮೊದಲೇ ಒಂದು ದಿನ ನಾನು ಅಲ್ಲಿ ಒಂದು ಉತ್ಸವ ನಡೆಯುತ್ತಿದ್ದಂತೆ ಕನಸು ಕಂಡಿದ್ದೆ. ಒಬ್ಬಾತ ಒಂದು ಚಿನ್ನದ ಕೋಲಿಗೆ ಸಿಲುಕಿಸಿದ್ದ, ಸಿಂಧೂರಲೇಪನ ಮಾಡಿದ್ದ ಒಂದು ಕೆಂಪು ಧ್ವಜವನ್ನು ಕೈಯಲ್ಲಿ ಹಿಡಿದು, ನನ್ನ ಬಳಿಗೆ ಬಂದು ಹೇಳಿದ — ''ಇದೋ, ನಿನ್ನ ಇಷ್ಟಮಂತ್ರ'' ಎಂದು. ಆ ಧ್ವಜದಲ್ಲಿ ಒಂದು ಮಂತ್ರ ಬರೆಯಲಾಗಿತ್ತು. ಅನೇಕ ದಿನಗಳ ಕಾಲ ಆ ಮಂತ್ರವನ್ನೇ ಜಪಮಾಡುತ್ತಿದ್ದೆ. ಆದರೆ ಅದ ರಲ್ಲಿ ನನಗೆ ನಂಬಿಕೆ ಮೂಡಲಿಲ್ಲ ; ಬಿಟ್ಟುಬಿಟ್ಟೆ. ಕೆಲವು ದಿನಗಳ ನಂತರ ನಾನು ಬೇಲೂರು ಮಠಕ್ಕೆ ಹೋಗಿ, ಬಾಬುರಾಮ ಮಹಾರಾಜರನ್ನು ಮಂತ್ರದೀಕ್ಷೆ ಪಡೆದುಕೊಳ್ಳುವ ವಿಷಯವಾಗಿ ಕೇಳಿದೆ. ಅವರು ಕೃಷ್ಣಲಾಲ ಮಹಾರಾಜ (ಸ್ವಾಮಿ ಧೀರಾನಂದ) ರೊಂದಿಗೆ ನನ್ನನ್ನು ಉದ್ಬೋಧನಕ್ಕೆ, ಶ್ರೀಮಾತೆಯವರ ಬಳಿಗೆ ಕಳುಹಿಸಿಕೊಟ್ಟರು. ದೀಕ್ಷೆ ನೀಡುವ ಸಮಯದಲ್ಲಿ ನಾನು ಶ್ರೀಮಾತೆಯವರ ಎಡಭಾಗದಲ್ಲಿ ಕುಳಿತೆ. ಅವರು ಧ್ಯಾನದಲ್ಲಿ ಕುಳಿತರು. ಅತ್ಯಂತ ಗಂಭೀರವಾಗಿದ್ದರು! ಅನಂತರ ಹೇಳಿದರು: ''ನಿನಗೆ ಈ ಮೊದಲೇ ಶ್ರೀರಾಮಕೃಷ್ಣರು ದೀಕ್ಷೆ ನೀಡಿದ್ದಾರೆ.'' ನಾನಂದೆ, ''ನಾನು ಕನಸಿನಲ್ಲಿ ಕಂಡದ್ದರ ಮೇಲೆ ನನಗೆ ನಂಬಿಕೆ ಉಂಟಾಗುತ್ತಿಲ್ಲ. ನೀವೇ ಮತ್ತೊಮ್ಮೆ ನನಗೆ ದೀಕ್ಷೆ ಕೊಡಿ.'' ಅವರು ನಗುತ್ತ ಹೇಳಿದರು, ''ಇದು ನಿನ್ನ ಮಂತ್ರ. ಈಗ ನೀನು ಜಪ ಮಾಡು.'' ಹೀಗೆಂದ ಅವರು ನನಗೆ ಕನಸಿನಲ್ಲಿ ನೀಡ ಲಾಗಿದ್ದ ಹಿಂದಿನ ಮಂತ್ರವನ್ನೇ ಉಚ್ಚರಿಸಿದರು. ಅವರು ಹೇಳಿ ದಂತೆಯೇ ನಾನು ಜಪ ಮಾಡತೊಡಗಿದೆ. ಜಪ ಮಾಡುವಾಗ ನನ್ನ ಬೆರಳು ಜಾರಿ ಹೋಗುತ್ತಿದ್ದುದನ್ನು ಕಂಡು ಅವರೆಂದರು, ''ಬೆರಳನ್ನು ಜಾರಿಸಬಾರದು. ಅದರಿಂದ ಜಪ ಕಳೆದುಹೋಗ ಬಹುದು.'' ಅನಂತರ ಹೇಳಿದರು, ''ನಾನು ಎಂದರೆ ಯಾರೋ, ಅವರು (ಶ್ರೀರಾಮಕೃಷ್ಣರು) ಅಂದರೂ ಅದೇ.'' ಸ್ವಲ್ಪ ತಡೆದು ಮತ್ತೆ ಹೇಳಿದರು, ''ಗುರು ಮತ್ತು ಇಷ್ಟದೇವತೆ ಎರಡೂ ಒಂದೇ. ಇದೇ ನಿನ್ನ ಇಷ್ಟದೇವತೆ; ಅದೇ ಶ್ರೀರಾಮಕೃಷ್ಣರು ಕೂಡ.'' ನಾನು ಅವರಿಗೆ ಸಾಷ್ಟಾಂಗ ಪ್ರಣಾಮ ಮಾಡಿ ಹೇಳಿದೆ, ''ಅಮ್ಮಾ, ನನಗೆ ಭಕ್ತಿ ಉಂಟಾಗುವಂತೆ ಮಾಡಿ.'' ಶ್ರೀಮಾತೆ ಯವರು ನನ್ನ ಹೃದಯದ ಮಧ್ಯೆ ಬೆರಳನ್ನಿಟ್ಟು ಹೇಳಿದರು, ''ಶ್ರೀರಾಮಕೃಷ್ಣರ ಕೃಪೆಯಿಂದ ಜ್ಞಾನಚಕ್ಷು ತೆರೆಯುವುದು. ಅವರು ನಿನ್ನ ಈ ಮೂರನೇ ಕಣ್ಣನ್ನು ತೆರೆಸುವರು. ನಿನ್ನ ಅಜ್ಞಾನ, ಅಂಧಕಾರ ದೂರವಾಗುವುದು. ನಿನಗೆ ಎಷ್ಟೊಂದು ಅನುಭೂತಿಗಳಾಗುವುವು ಎಂಬುದನ್ನು ನೀನು ನೋಡುವೆ. ಬಹಳ ಧೈರ್ಯದಿಂದಿರು.''

೧೯೧೫ ನೇ ಇಸವಿಯಲ್ಲಿ ಜಗದ್ಧಾತ್ರೀ ಪೂಜೆಯ ಸಂದರ್ಭ ದಲ್ಲಿ ನಾವು ಬಾಂಕುರದಿಂದ ಶ್ರೀಮಾತೆಯವರ ದರ್ಶನ ಪಡೆ ಯಲು ಜಯರಾಮಬಾಟಿಗೆ ಹೋದೆವು. ಆಗ ಬಾಂಕುರದಲ್ಲಿ ದುರ್ಭಿಕ್ಷವುಂಟಾಗಿ, ಸೇವಾಕಾರ್ಯಗಳು ನಡೆಯುತ್ತಿದ್ದವು. ಭವಾನಿ, ವೀರೇನ್, ಸ್ವಾಮಿ ಶೈಲಾನಂದರು, ಸ್ವಾಮಿ ಗಿರಿಜಾ ನಂದರು, ವಿಭೂತಿ (ಘೋಷ್) – ನಾವೆಲ್ಲರೂ ಅಲ್ಲಿಂದ ಜೊತೆ ಯಲ್ಲಿ ಹೊರಟಿದ್ದೆವು. ಆಗ ಶ್ರೀಮಾತೆಯವರ ಜೊತೆಗೆ ರಾಸ ಬಿಹಾರಿ ಮಹಾರಾಜ್ ಇದ್ದರು. ಅರೂಪಚೈತನ್ಯ( ಹೇಮೇಂದ್ರ) ಕೂಡ ಇದ್ದರು. ದುರ್ಭಿಕ್ಷದ ಸಮಯದಲ್ಲಿ ಶ್ರೀಮಾತೆಯವ ರಿಂದ ಮಂತ್ರದೀಕ್ಷೆ ಪಡೆದಿದ್ದ ಡಾಕ್ಟರ್ ವೈಕುಂಠ (ಮುಂದೆ ಸ್ವಾಮಿ ಮಹೇಶ್ವರಾನಂದ) ಒಂದು ದಿನ ಇದ್ದಕ್ಕಿದ್ದಂತೆ ಶ್ರೀಮಾತೆ ಯವರ ಬಳಿಗೆ ಹೋಗಿ, ಆಶ್ರಮ ಸೇರಿಕೊಂಡರು.

೧೯೧೪ರಲ್ಲಿ ಆತ್ಮಾರಾಮದ ಕರಡಿಗೆಯಲ್ಲೇ ಕಾಳೀಪೂಜೆ ಹಾಗೂ ಜಗದ್ಧಾತ್ರೀ ಪೂಜೆ ಮಾಡುತ್ತಿದ್ದರು. ಈ ಬಾರಿ ( ಅಂದರೆ, ೧೯೧೫) ಜಯರಾಮಬಾಟಿಯಲ್ಲಿ ಜಗದ್ಧಾತ್ರೀ ಪೂಜೆಯ ಸಮಯ ದಲ್ಲಿ ಶ್ರೀಮಾತೆಯವರನ್ನು ಕೇಳಿದೆ: ''ಆತ್ಮಾರಾಮದ ಕರಡಿಗೆ ಯಲ್ಲೇ ಇವರ ಪೂಜೆ ನಡೆಯುವುದೆ? **'ಗುಹ್ಯಾತಿಗುಹ್ಯ ಗೋಪ್ತ್ರೀ ತ್ವಂ ಗೃಹಾಣಾಸ್ಮದ್ ಕೃತಂ ಜಪಮ್। ಸಿದ್ಧಿರ್ಭವತು ಮೇ ದೇವಿ ತ್ವತ್ಪ್ರಸಾದಾತ್ ಮಹೇಶ್ವರಿ**' ಎಂದು ಹೇಳಿ ಆ ಕರಡಿಗೆ ಯಲ್ಲೇ ಜಪ ಸಮರ್ಪಣೆ ಮಾಡುತ್ತೇವೆ, ಅದರಿಂದ ದೋಷ ವುಂಟಾಗದೆ?'' ಅದಕ್ಕೆ ಶ್ರೀಮಾತೆ ಹೇಳಿದರು: ''ಯಾಕೆ ಹಾಗಾಗ ಬೇಕು? ನೀನು ವೇದಾಂತ ಓದುತ್ತೀಯಾ? ಠಾಕೂರರೇ ಮಹೇ ಶ್ವರ, ಠಾಕೂರರೇ ಮಹೇಶ್ವರಿ. ಶುದ್ಧಸತ್ವದಿಂದ ಕೂಡಿದ ಯೋಗ ಮಾಯೆಯೇ ಅವರ ದೇಹ. ಅವರೇ ಶಕ್ತಿಸಮೇತವಾದ ಬ್ರಹ್ಮ. ಶಿವ ಮತ್ತು ಶಕ್ತಿ ಒಂದೇ. ಶ್ರೀರಾಮಕೃಷ್ಣರಿಗೆ ಕಾಯಿಲೆಯಾಗಿ ದ್ದಾಗ ಒಂದು ದಿನ ನಾನು ನೋಡಿದೆ, ಕಾಳೀಮಾತೆಯ ಕತ್ತು ಬಾಗಿಕೊಂಡಿತ್ತು. ನಾನು ಕೇಳಿದೆ, ''ಅಮ್ಮಾ, ನೀನೇಕೆ ಹೀಗಿ ದ್ದೀಯಾ?'' ಅಂತ. ಅದಕ್ಕೆ ಅವಳೆಂದಳು, ''ಅವನ ಅದರ (ಗಂಟಲಿನ ಹುಣ್ಣಿನ) ಕಾರಣದಿಂದಾಗಿ. ನನಗೂ ಗಂಟಲಲ್ಲಿ ತುಂಬಾ ನೋವು.''

ಬಾಂಕುರದಲ್ಲಿ ದುರ್ಭಿಕ್ಷವುಂಟಾಗಿ, ಏನು ಮಾಡಿದರೂ ಮಳೆ ಬರಲಿಲ್ಲ. ಬಾಂಕುರದ ಕಾಲೋ ವಿಭೂತಿ (ಘೋಷ್) ಯವರ ಮೂಲಕ ಶ್ರೀಮಾತೆಯವರಿಗೆ ಸಂದೇಶ ಕಳುಹಿಸಿ ದ್ದಾಯಿತು: ''ಸುಮಾರು ಎರಡು ವರ್ಷಗಳಿಂದ (೧೯೧೫– ೧೬) ಮಳೆ ಬಿದ್ದಿಲ್ಲ. ಊರಿಗೆ ಊರೇ ಬೆಂದುಹೋಗಿದೆ. ಒಳ್ಳೆಯ ಬಾವಿಗಳೆಲ್ಲವೂ ಇಂಗಿಹೋಗಿವೆ. ಅಣೆಕಟ್ಟುಗಳ ನೀರೂ ಕಡಿಮೆ ಯಾಗುತ್ತ ಬಂದಿವೆ. ರಸ್ತೆಯ ಇಕ್ಕೆಲಗಳಲ್ಲಿರುವ ಮರಗಳಲ್ಲಿ ಎಲೆಗಳೇ ಇಲ್ಲ ; ಈಗ ಇದಕ್ಕೆ ತಾವು ಏನಾದರೂ ವ್ಯವಸ್ಥೆ ಮಾಡಿ.'' ಇದನ್ನು ಕೇಳಿದ ಶ್ರೀಮಾತೆ ಗಂಭೀರ ಭಾವ ತಾಳಿ ಹೇಳಿದರು: ''ಹಾಗೇನು? ಠಾಕೂರರು ಇದೇನು ಮಾಡಿ ಬಿಟ್ಟರು!'' ಸ್ವಲ್ಪ ಹೊತ್ತು ಮೌನವಾಗಿದ್ದ ಅವರು, ಬಳಿಕ ಹೀಗೆಂ ದರು: ''ಮಳೆ ಬರುವವಲ್ಲಿಯ ತನಕ ಠಾಕೂರರಿಗೆ ತಾವರೆ ಹೂಗ ಳಿಂದ ಪೂಜೆ ಮಾಡಲು ಅವರಿಗೆ ಹೇಳು'' ಎಂದರು. ಅನಂತರ ನಗುತ್ತ ಹೇಳಿದರು, ''ತಾಯಿ ಸಿಂಹವಾಹಿನಿಯ ಕೃಪೆಯಿಂದ

ಈ ಊರಿನಲ್ಲಿ ಏನೂ ಅನಾವೃಷ್ಟಿಯಾಗಿಲ್ಲ'' ಎಂದರು. ನಿಜ ವಾಗಿಯೂ, ಆ ಮರಳುಗಾಡಿನ ನಡುವೆ ಜಯರಾಮಬಾಟಿ-ಕಾಮಾರಪುಕುರ ಗ್ರಾಮಗಳು ಮರುದ್ಯಾನದಂತಿದ್ದವು. ನಾಲ್ಕೂ ಕಡೆ ಹಸಿರು, ನೀರು ತುಂಬಿದ ಬಾವಿಗಳು, ಕೆರೆಗಳಲ್ಲಿ ನೀರಿನ ಅಲೆಗಳ ತಳಮಳ; ಆಮೋದರ ನದಿಯಲ್ಲೂ ಯಾವಾಗಲೂ ನೀರು ಇರುತ್ತಿತ್ತು.

ನಾವು ಪುರುಲಿಯಾದಿಂದ ಸುಮಾರು ಒಂದು ಸಾವಿರಕ್ಕೂ ಹೆಚ್ಚು ತಾವರೆ ಹೂಗಳನ್ನು ತಂದು ಶ್ರೀರಾಮಕೃಷ್ಣರ ಪೂಜೆ ಮಾಡಿದೆವು. ಅಂತೆಯೇ, ಬಾಣೇಶ್ವರ ಶಿವನ ಲಿಂಗವನ್ನು ತಂದು, ಅದರ ಮೇಲೆ ನೀರಿನ ಅಭಿಷೇಕ ಮಾಡಿದೆವು. ಬೆಳಿಗ್ಗೆ ಹೊತ್ತು ಅನೇಕ ಮಂದಿ ದಾರಕೇಶ್ವರ ನದೀತೀರದಲ್ಲಿ ಒಟ್ಟುಸೇರಿ, ಏಕತ್ಯೇಶ್ವರ ಶಿವನ ತಲೆಗೆ ಅಭಿಷೇಕ ಮಾಡಿ ಬಂದೆವು. ಮಧ್ಯಾಹ್ನ ಕಳೆದುಹೋಗುತ್ತಿದ್ದಂತೆಯೇ, ಆಕಾಶದಲ್ಲಿ ಕಾರ್ಮುಗಿಲುಗಳು ದಟ್ಟೈಸಿ ಮೇಲಕ್ಕೆದ್ದು ಬರತೊಡಗಿದವು. ಬಳಿಕ ಸಾಯಂಕಾಲ ನಾಲ್ಕೂವರೆ ಗಂಟೆಯ ಸುಮಾರಿಗೆ ಜೋರಾಗಿ ಮಳೆ ಸುರಿಯ ತೊಡಗಿತು. ೪-೫ ಗಂಟೆ ಹೊತ್ತು ಮಳೆ ಸುರಿಯುತ್ತಲೇ ಇತ್ತು. ಮರುದಿನ ಬೆಳಿಗ್ಗೆ ನೋಡಿದಾಗ ಬಾವಿ, ಮೈದಾನ, ನದಿ, ಕಾಲುವೆ, ಬಿಲ ಎಲ್ಲೆಲ್ಲೂ ನೀರು ತುಂಬಿಕೊಂಡಿತ್ತು. ಗದ್ದೆಯಲ್ಲೆಲ್ಲ ಬಿರುಕು ಗಳು ತುಂಬಿಕೊಂಡಿದ್ದವು, ಈಗ ಅವೆಲ್ಲ ಜೋಡಿಕೊಂಡಿವೆ.

ಈ ಸುದ್ದಿ ನಾಲ್ಕೂ ದಿಕ್ಕಿಗೆ ಹರಡಿತು. ದೂರದ ಊರುಗಳಲ್ಲಿ ಎಲ್ಲೆಲ್ಲಿ ಮಳೆಯಾಗಿರಲಿಲ್ಲವೋ, ಅಲ್ಲಿಂದ ಜನರು ಬರತೊಡಗಿದರು; ಅವರ ಊರಿಗೆ ಹೋಗಿ ಶ್ರೀರಾಮಕೃಷ್ಣರ ಪೂಜೆ ಮಾಡು ವುದಕ್ಕೋಸ್ಕರ. ನಮಗೆ ಸಾಧ್ಯವಾದಷ್ಟು ಬಾರಿ ನಾವು ಸೈಕಲ್‌ನಲ್ಲಿ ಹೋಗಿ ಹಲವೆಡೆ ಇದೇ ರೀತಿ ಪೂಜೆ ಮಾಡಿದೆವು. ಅದೇ ರೀತಿ ಅಲ್ಲೆಲ್ಲ ಮಳೆಯಾಗತೊಡಗಿತು. ಅದೇ ರೀತಿ, ಅನೇಕ ಸ್ಥಳಗಳಲ್ಲಿ ಜನರು ಶ್ರೀರಾಮಕೃಷ್ಣರ ಭಾವಚಿತ್ರವನ್ನು ಖರೀದಿಸಿ, ಬ್ರಾಹ್ಮಣ ರಿಂದ ಅವರ ಪೂಜೆ ಮಾಡಿಸಿದರು; ಅಲ್ಲೂ ಇದೇ ರೀತಿಯ ಫಲ ವುಂಟಾಯಿತು.

ಒಂದು ಸಲ ಜಯರಾಮಬಾಟಿಯಲ್ಲಿ ಲಲಿತ ಚಟ್ಟೋಪಾಧ್ಯಾಯನ ವಿಷಯವಾಗಿ ಮಾತುಕತೆ ನಡೆಯುತ್ತಿತ್ತು. ಅವನ ಮೇಲೆ ಶ್ರೀಮಾತೆಯವರ ಕೃಪೆ ಅಷ್ಟೊಂದು ಉಂಟಾಗಿದ್ದರೂ, ಆತನಿಗೆ ಮದ್ಯಪಾನ ಬಿಡಲಾಗಲಿಲ್ಲ ; ಅವನಿಗೂ ಶ್ರೀಮಾತೆ ಯವರ ಮೇಲೆ ಅಸಾಧಾರಣ ಭಕ್ತಿಯಿತ್ತು. ಈ ಮಾತುಗಳನ್ನೆಲ್ಲ ಕೇಳಿದ ಶ್ರೀಮಾತೆ ಹೀಗೆ ಹೇಳಿದರು: ''ಚರಕದಲ್ಲಿ ಕೆಂಪು, ನೀಲಿ ಬಣ್ಣದ ದಾರಗಳನ್ನು ಸುತ್ತುತ್ತಾರೆ. ಸುತ್ತುವಾಗ ಕ್ರಮೇಣ ಕೆಂಪು, ನೀಲಿ ದಾರಗಳು ಒಟ್ಟಿಗೆ ಸೇರಿಕೊಳ್ಳುತ್ತವೆ. ಬಿಡಿಸುವಾಗ ಅವೆ ರಡೂ ಮತ್ತೆ ಬೇರೆ ಬೇರೆಯಾಗಿ ಬಿಡಿಸಿಕೊಳ್ಳುತ್ತವೆ. ಎರಡೂ ಬೇರೆ ಬೇರೆ ರೀತಿ – ಒಂದು ಕರ್ಮಬಂಧನ ಮಾಡಿಸುತ್ತದೆ, ಇನ್ನೊಂದು ಕರ್ಮಬಂಧನದಿಂದ ಬಿಡಿಸುತ್ತದೆ. ನೋಡುವುದಕ್ಕೆ ಎರಡೂ ಒಂದೇ ರೀತಿ.''

'ಉದ್ಬೋಧನ'ದಲ್ಲಿ ಪೂಜಾಗೃಹದ ಪೀಠದಲ್ಲಿ ಹಲವು ಬಗೆಯ ದೇವದೇವತೆಗಳಿದ್ದಾರೆ: ಮಾಕುವಿನ ರಾಧಾಕೃಷ್ಣ, ಶ್ರೀಮಾತೆ ಯವರ ಗೋಪಾಲ, ಜಗದ್ಧಾತ್ರೀ ಕವಚ, ಯೋಗಿನ್-ಮಾ ಅವರ ಎರಡು ಗೋಪಾಲನ ಪ್ರತಿಮೆಗಳು, ಬಾಣೇಶ್ವರ, ಎರಡು ಗೋವರ್ಧನ ಶಿಲೆ, ಶ್ರೀರಾಮಕೃಷ್ಣರ ಭಾವಚಿತ್ರ, ಕಪಿಲ ಮಹಾ ರಾಜರ ಕಾಳೀಮಾತೆ ಇತ್ಯಾದಿ.

ಕಪಿಲ ಮಹಾರಾಜರಿಗೆ ಅನಾರೋಗ್ಯವಾಗಿದ್ದುದರಿಂದ ಬೇಲೂರು ಮಠದಿಂದ ಪೂಜೆ ಮಾಡಲು ನನ್ನನ್ನು 'ಉದ್ಬೋಧನ'ಕ್ಕೆ ಕಳುಹಿಸಿಕೊಟ್ಟಿದ್ದರು. ಇದು ಬಲರಾಮ ಮಂದಿರದಲ್ಲಿ ಬಾಬುರಾಮ ಮಹಾರಾಜರು ದೇಹತ್ಯಾಗ ಮಾಡುವುದಕ್ಕೆ ಕೆಲವು ದಿನ ಮೊದಲು. ನಾನು ಮನೆಯಲ್ಲಿದ್ದಾಗ ಬಾಣೇಶ್ವರ, ಸಾಲಿಗ್ರಾಮ, ಶಿವ, ಗೋಪಾಲ ಮುಂತಾದ ದೇವತೆಗಳಿಗೆ ಹೇಗೆ ಪೂಜೆ ಮಾಡುತ್ತಿದ್ದೆನೋ, ಅದೇ ರೀತಿ ಇಲ್ಲೂ ಪೂಜೆ ಮಾಡು ತ್ತಿದ್ದೆ. ಶ್ರೀಮಾತೆಯವರು ಜಯರಾಮಬಾಟಿಯಿಂದ ಬಂದಾಗ ಅವರನ್ನು ಕೇಳಿದೆ: ''ಈ ದೇವತೆಗಳಿಗೆಲ್ಲ ಹೇಗೆ ಪೂಜೆ ಮಾಡ ಬೇಕು?'' ''ಈಗ ಹೇಗೆ ಮಾಡುತ್ತಿದ್ದೀಯಾ?'' ಎಂದು ಅವರು ನನ್ನನ್ನು ಕೇಳಿದರು. ನಾನು ಪೂರ್ವಾಶ್ರಮದಲ್ಲಿ ನನ್ನ ಅಜ್ಜಿ ಯಿಂದ ಯಾವ ಮಂತ್ರಗಳನ್ನೆಲ್ಲ ಕಲಿತಿದ್ದೆನೋ, ಅದನ್ನೆಲ್ಲ ಹೇಳಿದೆ. ಅವರೆಂದರು: ''ನಿನ್ನ ಇಷ್ಟದೇವತೆಯ ಬೀಜಮಂತ್ರ ದಿಂದಲೇ ಎಲ್ಲ ಪೂಜೆಯನ್ನೂ ಮಾಡು. ಇಷ್ಟದೇವತೆಯೇ ಎಲ್ಲವೂ ಆಗಿದೆ.'' ಹೀಗೆಂದ ಅವರು, ಇಷ್ಟದೇವತೆಯ ಬೀಜ ಮಂತ್ರದೊಂದಿಗೆ ನಮಃ ಎಂಬ ಶಬ್ದವನ್ನು ಸೇರಿಸುತ್ತ ಎಲ್ಲ ವನ್ನೂ ತಿಳಿಸಿಕೊಟ್ಟರು. ಮತ್ತೆ ಅವರೆಂದರು: ''ಎಂದಾದರೂ ನಿನಗೆ ಬೇರೆ ದೇವ-ದೇವಿಯರ ಪೂಜೆ ಮಾಡಬೇಕೆಂಬ ಇಚ್ಛೆ ಉಂಟಾದರೆ, ಆಗ ಠಾಕೂರರ ಮೂರ್ತಿಗೇ ಪೂಜೆ ಮಾಡಿದರೂ ಸಾಕು. ಕಾರಣ, ಇಷ್ಟದೇವತೆ ಹಾಗೂ ಅವರು ಒಂದೇ ಆಗಿ ದ್ದಾರೆ. ಅವರೇ ಸರ್ವದೇವದೇವಿಸ್ವರೂಪರಾಗಿದ್ದಾರೆ.''

ಒಂದು ದಿನ ದ್ವಿಜೇನ್ (ಸ್ವಾಮಿ ಗಂಗೇಶಾನಂದ), ನಾನು ಮುಂತಾದವರೆಲ್ಲ ಚಹಾ ಕುಡಿದ ನಂತರ 'ಹಸಿವಾಗುತ್ತಿದೆ,' 'ಹಸಿವೆ' ಎಂದೆಲ್ಲ ಹೇಳಿಕೊಳ್ಳುತ್ತಿದ್ದೆವು. ಅಂದರೆ, ಬೆಳಿಗ್ಗೆ ಹೊತ್ತು ಠಾಕೂರರ ಪ್ರಸಾದ ವಿತರಣೆ ಮಾಡುವುದು ತಡವಾಗುತ್ತಿತ್ತು. ಗೋಲಾಪ್ ಮಾ ವಿತರಿಸುತ್ತಿದ್ದರು. ನಾನು ಒಂಬತ್ತು ಗಂಟೆಗೆ ಸ್ನಾನ ಮಾಡಿ ಬಂದು, ಒಂಬತ್ತೂವರೆ ಗಂಟೆಗೆ ಪೂಜೆ ಮಾಡಲು ಆರಂಭಿಸುತ್ತಿದ್ದೆ. ಹತ್ತೂವರೆ ಗಂಟೆಯ ಸುಮಾರಿಗೆ ನನ್ನ ಪೂಜೆ ಮುಗಿಯುತ್ತಿತ್ತು. ಪೂಜೆಯ ನೈವೇದ್ಯಕ್ಕಾಗಿ ಎಲ್ಲವನ್ನೂ ತಯಾರು ಮಾಡಿದ ನಂತರ, ಗೋಲಾಪ್ ಮಾ ಸ್ನಾನ ಮಾಡಲು ಗಂಗಾ ನದಿಗೆ ಹೋಗುತ್ತಿದ್ದರು. ಮರಳಿ ಬರುವಾಗ ತುಂಬ ತಡವಾಗು ತ್ತಿತ್ತು. ಹಾಗೆ ತಡವಾಗುತ್ತಿದ್ದುದನ್ನು ಕಂಡು, ಶ್ರೀಮಾತೆಯವರು ಠಾಕೂರರ ನೈವೇದ್ಯವನ್ನು ಎರಡು ಭಾಗ ಮಾಡಿ, ಒಂದು ಭಾಗವನ್ನು ಠಾಕೂರರಿಗೋಸ್ಕರ ಪ್ರತ್ಯೇಕ ಇಟ್ಟು , ಇನ್ನೊಂದು

ಭಾಗವನ್ನು ಠಾಕೂರರಿಗೆ ನಿವೇದಿಸಿ, ಶಿಷ್ಯಂದಿರಿಗೋಸ್ಕರ ಕಳುಹಿಸಿಕೊಟ್ಟರು. ಅದನ್ನು ಕೇಳಿದ ಮಹಾಪುರುಷ ಮಹಾರಾಜರು ಹೇಳಿದರು, ''ಇವರು ಯಾರಿಗೂ ಮಾಡಲು ಸಾಧ್ಯವಾಗದ್ದನ್ನು ಶ್ರೀಮಾತೆ ಮಾತ್ರವೇ ಮಾಡಬಲ್ಲರು.''

ಒಂದು ದಿನ ನಾನು 'ಉದ್ಬೋಧನ'ದಲ್ಲಿ ಶ್ರೀಗಂಧ ತೇಯುತ್ತಿದ್ದೆ. ಶ್ರೀಮಾತೆಯವರು ಉತ್ತರ ದಿಕ್ಕಿನ, ಬಾಗಿಲ ಪಕ್ಕದಲ್ಲಿ, ವಾಯವ್ಯ ದಿಕ್ಕಿಗೆ ಮುಖ ಮಾಡಿ ಜಪಮಾಲೆಯೊಂದಿಗೆ ಜಪ ಮಾಡುತ್ತ ಕುಳಿತಿದ್ದರು. ಯಾರೂ ಇಲ್ಲದ್ದನ್ನು ಕಂಡು ನಾನು ಕೇಳಿದೆ: ''ಅಮ್ಮಾ, ನಡುನಡುವೆ ಮನಸ್ಸು ಏಕೆ ದುರ್ಬಲವಾಗುವುದು?'' ಅದನ್ನು ಕೇಳಿದ ಅವರು ಮಾಲೆಯನ್ನು ಬದಿಗಿಟ್ಟು ಹೇಳಿದರು, ''ಈ ವಿಷಯದ ಕಡೆಗೆ ಗಮನ ಕೊಡು: ಠಾಕೂರರನ್ನು ಬಿಟ್ಟು ಇನ್ನು ಯಾರ ಮನಸ್ಸಿನಲ್ಲಿ ದುರ್ಬಲತೆ ಉಂಟಾಗುವುದಿಲ್ಲ? ಇಂದಿನವರೆಗೂ, ಯಾರ ಮನಸ್ಸಿನಲ್ಲಿ ಸ್ವಲ್ಪವೂ ದುರ್ಬಲತೆ ಉಂಟಾಗಿಲ್ಲವೋ, ಅಂಥ ಮಹಾಪುರುಷರು ಬೇರೆ ಯಾರು ಜನಿಸಿದ್ದಾರೆ? ಸುಧಾರಿಸಲು ಪ್ರಯತ್ನಿಸಬಹುದು; ನನ್ನ ಮನಸ್ಸಿನಲ್ಲಿ ದುರ್ಬಲತೆ ಉಂಟಾಗಿದೆ ಎಂದು ಮನುಷ್ಯನಿಗೆ ಅರ್ಥವಾದರೂ ಕೂಡ ಅದೂ ಒಂದು ಬಗೆಯ ಒಳ್ಳೆಯ ಶಿಕ್ಷಣವೇ. ಮಹಾಮಾಯೆ ಅದರಿಂದ ಸಂತೋಷಗೊಂಡು, ಅವನಿಗೆ ದಾರಿ ಬಿಟ್ಟುಕೊಡುವಳು. ಮನುಷ್ಯ ಕೆಲವು ದಿನ ಚೆನ್ನಾಗಿದ್ದರೂ ಭಾವಿಸುತ್ತಾನೆ, 'ನನಗೆ ಎಲ್ಲವೂ ಆಗಿಬಿಟ್ಟಿತು' ಅಂತ. ಇನ್ನಷ್ಟು ಮೇಲಕ್ಕೆ ಹೋಗಲು ಅವನು ಪ್ರಯತ್ನ ಮಾಡಲಾರ. ಆದರೆ ವಿವೇಕಿಗಳ ಮನಸ್ಸಿನಲ್ಲೂ ನಡುನಡುವೆ ದುರ್ಬಲತೆ ಬಂದುಬಿಡುವುದರಿಂದಲೇ ಠಾಕೂರರು ನೆನಪಿಸುತ್ತಾರೆ, 'ಇನ್ನೂ ಸಾಧನೆ ಮುಗಿದಿಲ್ಲ ; ಭೂತಪ್ರೇತಾದಿಗಳು ನಾಲ್ಕೂಕಡೆ ಕುಳಿತಿವೆ, ಒಂದಿಷ್ಟು ಅವಕಾಶ ಸಿಕ್ಕಿದರೂ ಹೆಗಲ ಮೇಲೆ ಹತ್ತಿ ಕುಳಿತುಕೊಳ್ಳುತ್ತವೆ'– ಅಂತ. ಇದರಿಂದೇನಾಗುವುದು? – ಅಹಂಕಾರ ನಾಶವಾಗುವುದು. ಎಷ್ಟು ದಿನ ಬದುಕಿರುತ್ತೀಯೋ, ಅಷ್ಟು ದಿನವೂ ಠಾಕೂರರಲ್ಲಿ ಶರಣಾಗತನಾಗಿ ಇರಬೇಕು. ಅಹಂಕಾರ ಉಂಟಾದರೆ ಈ ಎಲ್ಲ ಕ್ಷುಲ್ಲಕ ಭಾವನೆಗಳು ಮನಸ್ಸಿನಲ್ಲಿ ಏಳುವುವು. ಕೊನೆಯವರೆಗೂ ಶರಣಾಗತಿಯ ಭಾವವನ್ನು ಇಟ್ಟುಕೊಂಡೇ ಬದುಕಬೇಕು. ಠಾಕೂರರೇ ಒಂದು ಬಾರಿ ತಮ್ಮ ದೇಹದಲ್ಲಿ ಕಾಮದ ಆವೇಗವನ್ನು ನಿಯಂತ್ರಿಸಿಕೊಂಡಿದ್ದರು; ಆದ್ದರಿಂದ ಜೀವರುಗಳು ಅಹಂಕಾರ ಹೊಂದಲು ಯಾವುದೇ ಕಾರಣಗಳಿಲ್ಲ.''

ಒಂದು ದಿನ ಸಾಯಂಕಾಲ 'ಉದ್ಬೋಧನ'ದಲ್ಲಿ ಶ್ರೀರಾಮಕೃಷ್ಣರನ್ನು ಎಬ್ಬಿಸುತ್ತಿದ್ದೆ[೭]; ಆಗ ಶ್ರೀಮಾತೆಯವರು ಕುಳಿತಿದ್ದರು. ಆಗ ಯೋಗಿನ್ ಮಾ ನನಗೆ ಕೇಳಿದರು, ''ಏನಪ್ಪಾ, ಇಲ್ಲಿ ನಿನಗೆ ಹೇಗನಿಸುತ್ತಿದೆ?'' ನಾನೆಂದೆ, ''ಇಲ್ಲಿನ ಕೆಲಸ ಒಂದೇ ರೀತಿ ಯಾಂತ್ರಿಕವಾದುದು. ಆದ್ದರಿಂದ ಇಲ್ಲಿ ಶ್ರೀಮಾತೆಯವರು ಇಲ್ಲದಿದ್ದರೆ, ಅನೇಕ ಬಾರಿ ಶುಷ್ಕಭಾವನೆಯುಂಟಾಗುವುದು. ಇಲ್ಲಿ ಶಾಸ್ತ್ರಗೀಸ್ತ್ರ ಇತ್ಯಾದಿಗಳನ್ನು ಅಭ್ಯಾಸಮಾಡಲು ಯಾರೂ ಇಲ್ಲ.'' ಆಗ ಶ್ರೀಮಾತೆ ಹೇಳಿದರು, ''ಠಾಕೂರರ ಸೇವೆ ಶುಷ್ಕವೇಕೆ ಆಗಬೇಕು? ಮನಸ್ಸಿನಲ್ಲಿ ವಿಚಾರ ಮಾಡಿ ನೋಡಬೇಕು, ಯಾಕೆ ಶುಷ್ಕವಾಗಿದೆ – ಅಂತ. ಮನುಷ್ಯರಿಗೆ ಒಂದೊಂದು ರೀತಿಯ ಅವಸ್ಥೆಯಲ್ಲಿ ಅಭ್ಯಾಸವಾಗಿಬಿಟ್ಟಿರುತ್ತದೆ; ಆಗ ಇನ್ನೊಂದು ಅವಸ್ಥೆಗೆ ಹೋಗಿಬಿಟ್ಟ ಕೂಡಲೆ, ಅಲ್ಲಿ ಚೆನ್ನಾಗಿಲ್ಲ ಅನ್ನಿಸುವುದು. ದೇಹ, ಮನಸ್ಸು ಎರಡೂ ಮೊದಲಿನಂತೆಯೇ ಇರಬೇಕು ಎಂದು ಬಯಸುತ್ತದೆ. ಆಗ ಠಾಕೂರರ ಬಳಿ ಪ್ರಾರ್ಥಿಸಬೇಕು. ಆಗ ನೋಡುವೆ, ಅವರು ಯಾವ ರೀತಿ ನಿನ್ನ ಮನಸ್ಸಿನಲ್ಲಿ ಉತ್ಸಾಹ ತುಂಬುತ್ತಾರೆ ಅಂತ. ಅದಲ್ಲದೆ, ಸಾಧನೆಯ ಮೊದಲ ದಿನಗಳಲ್ಲಿ ರಾತ್ರಿ ಹಗಲು ವಿಚಾರ, ಚರ್ಚೆ ಒಳ್ಳೆಯದಲ್ಲ. ಅದು ಮನಸ್ಸನ್ನು ಶುಷ್ಕವಾಗಿಸುವುದು. ಠಾಕೂರರ ಜೀವನ ಲೀಲೆಯ ಕುರಿತಾಗಿ ಚರ್ಚಿಸಿದರೆ, ಮತ್ತೆ ಮನಸ್ಸು ಹೇಗೆ ಉತ್ಸಾಹಗೊಳ್ಳುವುದು ಎಂಬುದನ್ನು ನೋಡುವೆ. ಶರತ್ ಎಷ್ಟೊಂದು ಸುಂದರವಾಗಿ 'ಲೀಲಾಪ್ರಸಂಗ' ಬರೆದಿದ್ದಾನೆ; ಅದೇ ರೀತಿ ಮಾಸ್ಟರ್ ಬರೆದ 'ಕಥಾಮೃತ' ('ಶ್ರೀರಾಮಕೃಷ್ಣ ವಚನವೇದ' –ಕನ್ನಡದಲ್ಲಿ) ಇವನ್ನು ಕೇಳಿದರೆ ಜೀವಕ್ಕೆ ತಂಪೆರೆದಂತಾಗುವುದು. ಅಕ್ಷಯ ಮಾಸ್ಟರನ 'ಪುಂಥಿ'ಯನ್ನು ಪ್ರತಿದಿನವೂ ಸ್ವಲ್ಪ ಸ್ವಲ್ಪ ಓದು. ಸಮಯವಾದಾಗಲೆಲ್ಲ ನಾನೂ ಪ್ರತಿದಿನ ಒಂದಿಷ್ಟು ಓದಿಸಿ ಕೇಳುತ್ತಿದ್ದೆ.''

ಸ್ವಲ್ಪ ಸಮಯದ ನಂತರ ಕೆಳ ಅಂತಸ್ತಿಗೆ ಬಂದು ನೋಡಿದೆ, ಯಾರೋ ಒಬ್ಬರು ಒಂದು ಬೈಬಲ್ ಪ್ರತಿಯನ್ನು ಇಟ್ಟು ಎಲ್ಲಿಗೋ ಹೋಗಿದ್ದರು. ಅದನ್ನು ತೆರೆದು ನೋಡಿದ ಕೂಡಲೇ ಈ ಭಾಗ ಕಣ್ಣಿಗೆ ಬಿತ್ತು: "And the Lord shall guide thee continually and satisfy thy soul in drought, and make fat thy bones: and thou shalt be like a watered garden, and like a spring of water, whose waters fail not.''[೮]

*(ಮುಂದುವರಿಯುವುದು)*

೭ ಪೂಜೆ ಮಾಡುವವರು ಶ್ರೀರಾಮಕೃಷ್ಣರ ಭಾವಚಿತ್ರದಲ್ಲಿ ಅವರು ಜೀವಂತವಾಗಿದ್ದಾರೆ ಎಂದೇ ಭಾವಿಸಿ, ಮಧ್ಯಾಹ್ನ ಮತ್ತು ರಾತ್ರಿವೇಳೆ ಫೋಟೋವನ್ನು, ಹಾಸಿಗೆಯಲ್ಲಿ ಮಲಗಿಸುತ್ತಾರೆ. ದೇವಾಲಯ ತೆರೆದಾಗ ಫೋಟೋವನ್ನು ನೇರವಾಗಿ ನಿಲ್ಲಿಸಿ ನಿದ್ರೆಯಿಂದ ಎಬ್ಬಿಸುತ್ತಾರೆ. ಇದೂ ಪೂಜೆಯ ಒಂದು ಭಾಗ. *(– ಅನು.)*

೮ Isaiah, 58.11

''ಭಗವತ್ಪ್ರೇಮದ ಒಂದು ಬಿಂದುವೇ ಆಗಲಿ ಯಾರಿಗಾದರೂ ದೊರೆತದ್ದೇ ಆದರೆ, ಕಾಮಕಾಂಚನ ಅತಿ ತುಚ್ಛವಾಗಿ ತೋರುತ್ತದೆ.''

— ಶ್ರೀರಾಮಕೃಷ್ಣ ಪರಮಹಂಸರು